## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **684 (650)** |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಿವಣ್ಣ ಬಿ.ಎಸ್. |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| **ಕ್ರಮ ಸಂಖ್ಯೆ** | **ಪ್ರಶ್ನೆ** | **ಉತ್ತರ** |
|---|---|---|
| **(ಅ)** | ರಾಜ್ಯದ ಮೂರು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗವು (NMC) ಸಿಬ್ಬಂದಿ ಹಾಗೂ ಮೂಲಸೌಕರ್ಯಗಳ ಕೊರತೆಯ ನೆಪವೊಡ್ಡಿ ಅನುಮತಿ ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ. |
| **(ಆ)** | ಅನುಮತಿ ನಿರಾಕರಿಸಲ್ಪಟ್ಟ ರಾಮನಗರ, ಕನಕಪುರ ಮತ್ತು ಬಾಗಲಕೋಟೆ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಅಗತ್ಯ ಸಿಬ್ಬಂದಿ ನೇಮಕ ಪೂರ್ಣಗೊಳಿಸಿ ಎನ್‌ಎಂಸಿಗೆ ಮರುಪ್ರಸ್ತಾವನೆ ಸಲ್ಲಿಸಲು ಕೈಗೊಂಡಿರುವ ಕ್ರಮಗಳೇನು? | **ರಾಮನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ:**<br>ರಾಮನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಮನಗರ ಈ ಸಂಸ್ಥೆಗೆ ಎನ್.ಎಂ.ಸಿ. ನಿಯಮಾವಳಿಗಳನ್ವಯ ಸೃಜಿಸಲಾಗಿರುವ ಹುದ್ದೆಗಳ 149 ಬೋಧಕ ಹುದ್ದೆಗಳ ಪೈಕಿ 134 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 18 ಆರ್‌ಜಿಯು 2026 (ಭಾಗ-2), ದಿನಾಂಕ: 11.08.2026ರಲ್ಲಿ ಅನುಮತಿ ನೀಡಲಾಗಿದೆ.<br><br>**ಕನಕಪುರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ:**<br>ಕನಕಪುರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕನಕಪುರ ಇಲ್ಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿಯಮಾವಳಿಗಳನ್ವಯ 100 ಸೀಟುಗಳ ಪ್ರವೇಶಾತಿಗೆ ವಿವಿಧ ವಿಭಾಗಗಳಲ್ಲಿ ಅವಶ್ಯಕವಿರುವ ಒಟ್ಟು 159 ಬೋಧಕ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>**ಬಾಗಲಕೋಟೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ:**<br>ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಬಾಗಲಕೋಟೆ ಸಂಸ್ಥೆಗೆ ಎನ್.ಎಂ.ಸಿ. ನಿಯಮಾವಳಿಗಳನ್ವಯ 100 ವಿದ್ಯಾರ್ಥಿಗಳ ಪ್ರವೇಶಾತಿಗೆ ಸೃಜಿಸಲಾದ 151 ಬೋಧಕ ಹುದ್ದೆಗಳ ಪೈಕಿ, 136 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 295 ಎಂಎಂಸಿ 2025 (ಭಾಗ-3), ದಿನಾಂಕ: 17.07.2026 ರಲ್ಲಿ ಅನುಮತಿಸಲಾಗಿದೆ. |
| **(ಇ)** | ರಾಮನಗರದಲ್ಲಿ ರೂ. 600 ಕೋಟಿ ವೆಚ್ಚದ ಆರ್‌ಜಿಯುಹೆಚ್‌ಎಸ್ (RGUHS) ಕ್ಯಾಂಪಸ್ ಕಾಮಗಾರಿ ಶೇ.70 ರಷ್ಟು ಪೂರ್ಣಗೊಂಡಿದ್ದರೂ ಹಾಗೂ ಬಾಗಲಕೋಟೆಯಲ್ಲಿ ಕಟ್ಟಡ ಸಿದ್ಧವಿದ್ದರೂ, ಕೇವಲ ಸಿಬ್ಬಂದಿ ಕೊರತೆಯಿಂದ ಅನುಮತಿ ತಪ್ಪಲು ಕಾರಣಗಳೇನು? | |

| | | |
|---|---|---|
| | | ತದನಂತರದಲ್ಲಿ, ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಬಾಗಲಕೋಟೆ ಸಂಸ್ಥೆಗೆ ನೇರ ನೇಮಕಾತಿ ಮೂಲಕ ಬೋಧಕ ವೃಂದದ 68 ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ರಾಮನಗರ, ಕನಕಪುರ ಮತ್ತು ಬಾಗಲಕೋಟೆ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯ ಇತ್ತೀಚಿನ ವಿವರವನ್ನು **<u>ಅನುಬಂಧ-1</u>** ರಲ್ಲಿ ಒದಗಿಸಿದೆ.<br><br>ಮೇಲ್ಕಂಡ ವೈದ್ಯಕೀಯ ಕಾಲೇಜುಗಳ ಪ್ರಾರಂಭಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಸಕಾಲದಲ್ಲಿ ಲಭ್ಯಗೊಳಿಸುವ ಉದ್ದೇಶದಿಂದ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡಲಾಗಿದ್ದು, ನೇಮಕಾತಿ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಿ, 2027-28ನೇ ಸಾಲಿಗೆ ಅನುಮತಿ ಪಡೆಯಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್.ಎಂ.ಸಿ.)ಕ್ಕೆ ಮರು ಪ್ರಸ್ತಾವನೆ ಸಲ್ಲಿಸಲಾಗುವುದು. |

**ಕಡತ ಸಂಖ್ಯೆ:** ಎಂಇಡಿ 489 ಎಂಎಂಸಿ 2026

**(ಡಾ. ಶರಣಪ್ರಕಾಶ್ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

# ಅನುಬಂಧ-1

## ಕಾಮಗಾರಿಗಳ ಪ್ರಸ್ತುತ ಹಂತ

ರೂ.ಕೋಟಿಗಳಲ್ಲಿ

| ಕಾಮಗಾರಿ ಹೆಸರು | ರಾಮನಗರದ ಅರ್ಚಕರಹಳ್ಳಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ಹಾಗೂ ಇತರೆ ಪೂರಕ ಕಟ್ಟಡಗಳ ನಿರ್ಮಾಣ ಕಾಮಗಾರಿ | ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ ಹೊಸ ವೈದ್ಯಕೀಯ ಕಾಲೇಜು, 300 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ, ಬಾಲಕ-ಬಾಲಕಿಯರ ಹಾಸ್ಟೆಲ್‌ಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಸತಿಗೃಹಗಳು ಹಾಗೂ ಇತರೆ ಸಂಬಂಧಿತ ಸೌಲಭ್ಯಗಳ ನಿರ್ಮಾಣ ಕಾಮಗಾರಿ | ಬಾಗಲಕೋಟೆ ಜಿಲ್ಲೆ, ಬಾಗಲಕೋಟೆಯಲ್ಲಿ ವೈದ್ಯಕೀಯ ಕಾಲೇಜು ಕಟ್ಟಡ, ಬಾಲಕ ಬಾಲಕಿಯರ ಹಾಸ್ಟೆಲ್‌ಗಳು, ಬೋಧಕ ಸಿಬ್ಬಂದಿಗಳ ವಸತಿಗೃಹಗಳು ಹಾಗೂ ಇತರೆ ಪೂರಕವಾದ ಕಾಮಗಾರಿಗಳು |
|---|---|---|---|
| ಅಂದಾಜು ಮೊತ್ತ | 600.00 | 550.00 | 450.00 |
| ಗುತ್ತಿಗೆ ಮೊತ್ತ | 555.21 | 443.84 | 319.05 |
| ಭೌತಿಕ ಪ್ರಗತಿ | **ಆಡಳಿತ ವಿಭಾಗ (Administrative Block):-**<br>1) ಬ್ಲಾಕ್ - A: ಬ್ಲಾಕ್ ಕೆಲಸ (ಗೋಡೆ ನಿರ್ಮಾಣ) ಪ್ರಗತಿಯಲ್ಲಿದೆ.<br>2) ಬ್ಲಾಕ್ - B,C&D : ಪ್ಲಾಸ್ಟರಿಂಗ್ ಕೆಲಸ ಪೂರ್ಣಗೊಂಡಿದೆ; ಬಣ್ಣ ಬಳಿಯುವ ಮತ್ತು ನೆಲಹಾಸಿನ (flooring) ಕೆಲಸಗಳು ಪ್ರಗತಿಯಲ್ಲಿವೆ.<br>**ಶೈಕ್ಷಣಿಕ ವಿಭಾಗ (Academic Block):-** MEP ಸೇವೆಗಳು ಮತ್ತು ನೆಲಹಾಸಿನ ಕೆಲಸಗಳು ಪ್ರಗತಿಯಲ್ಲಿವೆ.<br>**ವಾಣಿಜ್ಯ ವಿಭಾಗ** (Commercial Block): ನೆಲಹಾಸಿನ ಕೆಲಸಗಳು ಪ್ರಗತಿಯಲ್ಲಿವೆ.<br>**ಕ್ಯಾಂಟೀನ್ ವಿಭಾಗ** (Canteen Block): ನೆಲಹಾಸಿನ ಕೆಲಸಗಳು ಪ್ರಗತಿಯಲ್ಲಿವೆ.<br>**ವಸತಿ ವಿಭಾಗಗಳು (Residential Blocks):-**<br>a) ಬೋಧಕ ಸಿಬ್ಬಂದಿ ವಸತಿಗೃಹಗಳು: ನೆಲಹಾಸು ಮತ್ತು ಬಣ್ಣ ಬಳಿಯುವ ಕೆಲಸಗಳು ಪ್ರಗತಿಯಲ್ಲಿವೆ.<br>b) ಡೀನ್, Medical Superdient, ನರ್ಸ್ ವಸತಿಗೃಹಗಳು & ಬೋಧಕೇತರ ಸಿಬ್ಬಂದಿ ವಸತಿಗೃಹಗಳು: ಬ್ಲಾಕ್ ಕೆಲಸ ಮತ್ತು ಪ್ಲಾಸ್ಟರಿಂಗ್ ಕೆಲಸ ಪ್ರಗತಿಯಲ್ಲಿವೆ.<br>c) ಬಾಲಕರ & ಬಾಲಕಿಯರ ಹಾಸ್ಟೆಲ್: ಟೈಲ್ಸ್ ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ.<br>d) ಅಡುಗೆಮನೆ ಮತ್ತು ಊಟದ ವಿಭಾಗ: ನೆಲಹಾಸು ಮತ್ತು ಬಣ್ಣ ಬಳಿಯುವ ಕೆಲಸಗಳು ಪ್ರಗತಿಯಲ್ಲಿವೆ.<br>e) ಕಾಂಪೌಂಡ್ ಗೋಡೆ & ರಸ್ತೆ ಕೆಲಸ: ಪ್ರಗತಿಯಲ್ಲಿದೆ.<br>70 % | ಕಾಲಂ ಎತ್ತರಿಸುವ ಕೆಲಸ ಪ್ರಗತಿಯಲ್ಲಿದೆ.<br>6 % | ತಾತ್ಕಾಲಿಕ ಶೈಕ್ಷಣಿಕ ಕಟ್ಟಡದ ಮೊದಲನೇ ಮಹಡಿಯ ಗಿಲಾವು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಬೋಧಕ ಕೊಠಡಿಯ ಹಾಗೂ ಎರಡನೇ ಮಹಡಿಯ ಕ್ಯಾಂಟೀನ್ ಟ್ರಸ್ ಕಾಮಗಾರಿ, ಇಟ್ಟಿಗೆ ಕಟ್ಟಡ ಕಾಮಗಾರಿ ಹಾಗೂ ಹೊರ ಭಾಗದ ಗಿಲಾವು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ನೂತನ ಶೈಕ್ಷಣಿಕ ಕಟ್ಟಡ ಅಡಿಪಾಯ ಕಾಮಗಾರಿ ಪೂರ್ಣಗೊಂಡಿದ್ದು, 80 ಫೂಟಿಂಗ್ ಗಳಿಗೆ ಪಿ.ಸಿ.ಸಿ ಹಾಕಲಾಗಿರುತ್ತದೆ, 72 ಫೂಟಿಂಗ್ ಹಾಗೂ ಕಾಲಂಗಳ ಕಬ್ಬಿಣದ ಕೆಲಸ ಪೂರ್ಣಗೊಂಡಿರುತ್ತದೆ.<br>2 % |
| ಆರ್ಥಿಕ ವೆಚ್ಚ | 255.31 | 22.27 | 15.95 |
| ಆರ್ಥಿಕ ಪ್ರಗತಿ ಶೇಕಡವಾರು | 60 % | 5 %<br>(Mobilization Advance) | (5 %)<br>(Mobilization Advance) |
| ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಅನುದಾನ | 344.69 | 527.73 | 303.10 |
| ಕಾಮಗಾರಿ ಮುಕ್ತಾಯದ ಸಂಭವನೀಯ ದಿನಾಂಕ | 30.05.2027 | 22.01.2028 | 15.03.2028 |

ಮುಖ್ಯ ಇಂಜಿನಿಯರ್,
[illegible], ಇಂಜಿನಿಯರಿಂಗ್ ಘಟಕ,
ಬೆಂಗಳೂರು